Security arrangements during Prime Minister's Visit to the State.

141. Sri D. B. KALMANKAR (Aland).—

Will the Chief Minister be pleased to state :—

(*a*) whether security arrangements were made at the time of visit of the Prime Minister of India to the State from 18th July 1970 to 20th July 1970 ;

(*b*) if so, the expenses incurred in this behalf by the State Government ?

Sri VEERENDRA PATIL (Chief Minister).—

(*a*) Yes.

(*b*) Rs. 1,09,338.

Sri D. B. KALMANKAR.—It is stated that Rs. 1,09,338 were expended on the Prime Minister's visit to the State. Has it come to the notice of Government that at Gulbarga there was very good gathering of 2 to 3 lakhs, but the police posted there was very inadequate due to which the Prime Minister who wanted to speak for more than one hour had to curtail her speech and end it within 7 to 8 minutes ?

† Sri VEERENDRA PATIL.—I do not know how long the Prime Minister spoke. The figure I have given is not the entire expenditure met during the tour of the Prime Minister. The figure given is only towards the expediture for security arrangements. I do not know what was the expenditure towards boarding, lodging and other arrangements. I do not have that information now. So far as the Gulbarga meeting is concerned, I do not know how long the Prime Minister spoke. I do not agree with the hon Member that the police arrangement was not adequate. On the other hand, I think there was some confusion. It appears, some gentlemen said that the merchant community did not co-operate as otherwise she would have collected some money. This is what I heard. So I do not think it is fair to blame the police for the security arrangements.

ಶ್ರೀ ಬಾಪೂಗೌಡ.—ಪ್ರಧಾನ ಮಂತ್ರಿಗಳು ನಮ್ಮ ರಾಜ್ಯಕ್ಕೆ ಭೇಟಿ ಕೊಟ್ಟಾಗ ಭದ್ರತಾ ಕಾರ್ಯಗಳಿಗಾಗಿ ನುಮಾರು ಒಂದು ಲಕ್ಷ ರೂಪಾಯಿಗಳನ್ನು ಖರ್ಚ ಮಾಡಿದ್ದೀವೆಂದು ಹೇಳಿದ್ದೀರಿ, ಎಂದರೆ ಆ ಸಂದರ್ಭದಲ್ಲಿ ಸರ್ಕಾರಿ ಕಾರ್ಯಗಳನ್ನೇನಾದರೂ ಮಾಡಿದ್ದಾರೆಯೇ ಆಥವಾ ಅವರು ಖಾಸಗೀ ಭೇಟಿ ಕೊಟ್ಟಿದ್ದಾರೆಯೇ ?

ಶ್ರೀ ವೀರೇಂದ್ರ ಪಾಟೀಲ್.—ಆ ಸಂದರ್ಭದಲ್ಲಿ ಪ್ರಧಾನ ಮಂತ್ರಿಗಳು ಏನು ಪ್ರೋಗ್ರಾಮ್ ಹಾಕಿದ್ದರು ಅದರಲ್ಲಿ ಒಂದು ಮಾತ್ರ ಸರ್ಕಾರಿ ಕಾರ್ಯಕ್ರಮ ಸೇರಿಸಿತ್ತು. ಉಳಿಕೆ ಪ್ರೋಗ್ರಾಮ್ ಬಹುಶಃ ಅಫಿಷಿಯಲ್ ಇರುವುದಿಲ್ಲ ಎಂದು ನನಗೆ ಅನಿಸುತ್ತದೆ.

ಶ್ರೀ ಎಂ ನಾಗಪ್ಪ.—ಶ್ರೀಮತಿ ಇಂದಿರಾಗಾಂಧಿಯವರು ಇಂಡಿಕೇಟ್ ಕಾಂಗ್ರೆಸ್ಸಿಗೆ ಸೇರಿದವರು. ಉತ್ತರ ಪ್ರದೇಶದಲ್ಲಿ ಸಿಂಡಿಕೇಟ್ ಕಾಂಗ್ರೆಸ್ ಸರ್ಕಾರ ಇದಾಗ ಪಕ್ಷದ ಕೆಲವಕ್ಕೋಸ್ಕರ ಪ್ರಧಾನ ಮಂತ್ರಿಗಳು ಅಲ್ಲಿಗೆ ಹೋದಾಗ ಅಗಿನ ಮುಖ್ಯ ಮಂತ್ರಿಗಳಾಗಿದ್ದ ಶ್ರೀ ಸಿ ಬಿ. ಗುಪ್ತಾ ಅವರು ಪ್ರಧಾನ ಮಂತ್ರಿಗಳನ್ನು ಸ್ವಾಗತಿಸುವುದಕ್ಕೆ ಹೋಗಿರಲಿಲ್ಲ. ಮತ್ತು ಅವರ ಸ್ವಾಗತಕ್ಕಾಗಿ ಯಾವ ವ್ಯವಸ್ಥೆಯನ್ನೂ ಮಾಡಿರಲಿಲ್ಲ. ಈಗ ನಮ್ಮ ರಾಜ್ಯಕ್ಕೆ ಪ್ರಧಾನ ಮಂತ್ರಿಗಳು ಪ್ರವಾಸ

ಬಂದಾಗ ಎಲ್ಲಾ ಖರ್ಚುನ್ನೂ ಸೇರಿಸಿ 10 ಲಕ್ಷ ರೂಪಾಯಿಗಳನ್ನು ನೀವು ಖರ್ಚು ಮಾಡಿರಬಹುದು ಎಂದು ಕಾಣುತ್ತದೆ. ಈ ರೀತಿ 10 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ ಪ್ರಧಾನಿಯವರನ್ನು ಸ್ವಾಗತ ಮಾಡುವುದಕ್ಕೂ ಹೋಗಿರುವುದನ್ನು ನೋಡಿದರೆ ಮಾನ್ಯ ಮುಖ್ಯ ಮಂತ್ರಿಗಳು ಇಂದಿರಾ ಗಾಂಧಿಯವರ ಪಕ್ಷವಾದ ಇಂಡಿಕೇಟ್ ಕಾಂಗ್ರೆಸ್ಸಿಗೆ ಸೇರಬೇಕು ಎಂದು ಏನಾದರೂ ಆ ರೀತಿ ಮಾಡಿದ್ದಾರೆಯೇ ?

ಶ್ರೀ ವೀರೇಂದ್ರ ಪಾಟೀಲ್.—ಒಂದು ವಿಚಾರವನ್ನು ತಿಳಿದುಕೊಳ್ಳಬಹುದು. ಪ್ರಧಾನ ಮಂತ್ರಿಗಳು ನಮ್ಮ ರಾಜ್ಯದಲ್ಲಿ ಪ್ರವಾಸವನ್ನು ಕೈಗೊಂಡಾಗ ವಿಶೇಷವಾಗಿ ಅವರ ಪಾರ್ಟಿಯ ಪ್ರೋಗ್ರಾಮ್ಸ್ ಇತ್ತು ಎಂಬುದು ಅವರ ಟೂರ್ ಪ್ರೋಗ್ರಾಮಿನಿಂದ ಗೊತ್ತಾಗುತ್ತದೆ. ಈ ಬಗ್ಗೆ ನಮಗೆ ಕೇಂದ್ರ ಸರ್ಕಾರದ ಇನ್‌ಸ್ಟ್ರಕ್ಷನ್ ಇದೆ. ಪ್ರಧಾನ ಮಂತ್ರಿಗಳು ಪಾರ್ಟಿ ಟೂರಾಗಲೀ ಅಫಿಷಿಯರ್ ಟೂರ್ ಆಗಲೀ, ನಾನ್-ಅಫಿಷಿಯಲ್ ಟೂರ್ ಆಗಲೀ, ಅವರು ಟೂರ್ ಮಾಡಿದಾಗ ಏನೇನು ಅರೇಂಜ್‌ಮೆಂಟ್ ಮಾಡಬೇಕೆಂಬುದು ಅನೇಕ ವರ್ಷಗಳಿಂದ ನಡೆದುಕೊಂಡು ಬಂದಿದೆ. ಅದಕ್ಕೆ ಅರೇಂಜ್‌ಮೆಂಟ್ ಮಾಡಬೇಕೆಂಬ ಬಗ್ಗೆ ಕೇಂದ್ರ ಸರ್ಕಾರದ ಇನ್‌ಸ್ಟ್ರಕ್ಷನ್ ಕೂಡ ಇದೆ. ಆದ್ದರಿಂದ ಅವರ ಇನ್‌ಸ್ಟ್ರಕ್ಷನ್ ಪ್ರಕಾರ ಪ್ರಧಾನಿಯವರು ಬಂದಾಗ ಏನೇನು ಅರೇಂಜ್‌ಮೆಂಟ್ಸ್ ಮಾಡಬೇಕೋ ಅದನ್ನು ಅನೇಕ ವರ್ಷಗಳಿಂದ ನಡೆಸಿಕೊಂಡು ಬಂದಿದೆ. ಪ್ರಧಾನಿಯವರು ಪ್ರವಾಸ ಕೈಗೊಂಡಾಗ ಪಕ್ಷದ ಕೆಲಸಕ್ಕೆ ಅಥವಾ ಸರ್ಕಾರಿ ಕೆಲಸಕ್ಕೆ ಎಂದು ಅವರ ಪ್ರವಾಸವನ್ನು ಬೈಫರ್‌ಕೇಟ್ ಮಾಡುವುದಕ್ಕಾಗುವುದಿಲ್ಲ ಪ್ರಧಾನಿಯವರು ಒಂದೇ ಒಂದು ಕ್ಷಣವಾಸಿಟಿಯಲ್ಲಿದ್ದರೂ ಟೂರ್ ಮಾಡಬಹುದು. ಆದರೆ ದುರ್ಬ್ಯವಹಾರದಿಂದ ಒಂದು ಸರ್ಕಾರಿ ಪ್ರೋಗ್ರಾಂ ಬಿಟ್ಟು ಉಳಿಕೆ ಪ್ರೋಗ್ರಾಂ ಪ್ರಧಾನಿಯವರ ಕಾರ್ಯಕ್ರಮದಲ್ಲಿ ಸೇರ್ಪಡೆ ಆಗಲಿಲ್ಲ. ಇದರ ಬಗ್ಗೆ ಚುಟ್ಟು ಹೇಳಬೇಕಾಗಿಲ್ಲ. ಪ್ರಧಾನ ಮಂತ್ರಿಗಳು ನಮ್ಮ ರಾಜ್ಯಕ್ಕೆ ಬಂದಾಗ ಮುಖ್ಯ ಮಂತ್ರಿಗಳಾಗಲೀ ಅಥವಾ ಬೇರೆ ಮಂತ್ರಿಗಳಾಗಲೀ ಸರ್ಕಾರದ ಪರವಾಗಿ ಅವರನ್ನು ರಿಸೀವ್ ಮಾಡಬೇಕು ಎಂದು ನಾವು ಮೊದಲಿಂದಲೂ ಒಂದು ಸತ್‌ಸಂಪ್ರದಾಯವನ್ನು ಹಾಕಿಕೊಂಡು ಬಂದಿದ್ದೇವೆ. ಆದ್ದರಿಂದ ಅದನ್ನು ಮುಂದುವರಿಸಿಕೊಂಡು ಹೋಗಬೇಕೆಂಬ ದೃಷ್ಟಿಯಿಂದ ನಾನು ಪ್ರಧಾನಿಯವರನ್ನು ಅವರು ಇಲ್ಲಿಗೆ ಬಂದಾಗ ರಿಸೀವ್ ಮಾಡಿದ್ದೇನೆ. ಮಾನ್ಯ ಸದಸ್ಯರು ಕೇಳಿದರು ನೀವು ಇಂಡಿಕೇಟಿಗೆ ಸೇರಬೇಕು ಎನ್ನುವ ದೃಷ್ಟಿಯನ್ನು ಇಟ್ಟುಕೊಂಡು ಏನಾದರೂ ಈ ರೀತಿ ವ್ಯವಸ್ಥೆ ಮಾಡಿದ್ದೀರಾ ಎಂದು. ನನ್ನ ನಿಲುವೆ ಬೇರೆ ಎಂಬುದು ಮಾನ್ಯ ಸದಸ್ಯರಿಗೂ ಮತ್ತು ಎಲ್ಲರಿಗೂ ಗೊತ್ತಿದೆ. ನಾನು ಇಂಡಿಕೇಟಿಗೆ ಸೇರಬೇಕು ಎನ್ನುವ ಅವಶ್ಯಕತೆ ಇದೆಯೆಂದು ಎನಿಸುವುದಿಲ್ಲ ಅದಕ್ಕೂ ಇದಕ್ಕೂ ಸಂಬಂಧವೂ ಇಲ್ಲ. ನಾನು ಮುಖ್ಯಮಂತ್ರಿಯಾಗಿ ಜವಾಬ್ದಾರಿಯಿಂದ ನನ್ನ ಕರ್ತವ್ಯವನ್ನು ನಿರ್ವಹಣೆ ಮಾಡಿದ್ದೇನೆಯೇ ಹೊರತು ಮತ್ತೆ ಯಾವ ದೃಷ್ಟಿಯಿಂದಲೂ ಅಲ್ಲ.

ಶ್ರೀ ಎಚ್. ಸಿದ್ಧವೀರಪ್ಪ.—ಸ್ವಾಮಿ, ಪ್ರಧಾನ ಮಂತ್ರಿಗಳು ನಮ್ಮ ರಾಜ್ಯದಲ್ಲಿ ಪ್ರವಾಸವನ್ನು ಕೈಗೊಂಡಾಗ ಒಂದು ಸರ್ಕಾರಿ ಕಾರ್ಯಕ್ರಮವನ್ನು ಮಾತ್ರ ಸೇರಿಸಿದ್ದರು ಬಾಕಿಯದನ್ನು ಸೇರಿಸಲಿಲ್ಲ ಎಂದು ಮಾನ್ಯ ಮುಖ್ಯ ಮಂತ್ರಿಗಳು ಹೇಳಿದರು. ಪ್ರಧಾನ ಮಂತ್ರಿಗಳು ಗದಗಿನ ಕಾಟನ್ ಸೊಸೈಟಿಯ ಕಾರ್ಯಕ್ರಮಕ್ಕೆ ಏನು ಹೋಗಿದರು ಅದು ಸರ್ಕಾರಿ ಕಾರ್ಯಕ್ರಮ ಎಂದು ಭಾವಿಸುತ್ತೀರಾ ಅಥವಾ ಖಾಸಗೀ ಕಾರ್ಯಕ್ರಮ ಎಂದು ಭಾವಿಸುತ್ತೀರಾ ? ಪ್ರಧಾನಿಯವರು ಹಿಂದೂಸ್ಥಾನದಲ್ಲಿಯೇ ಪ್ರವಾಸವಾಡಲಿ ಅಥವಾ ಪ್ರಪಂಚದ ಯಾವ ಭಾಗದಲ್ಲಿಯೇ ಪ್ರವಾಸ ಮಾಡಲಿ ಅವರು ಪ್ರಧಾನಿಯಾಗಿ ಪ್ರವಾಸ ಮಾಡುತ್ತಾರೆಯೇ ಅಥವಾ ಬೇರೆ ಕ್ಯಾಪಸಿಟಿಯಲ್ಲಿ ಪ್ರವಾಸ ಮಾಡುತ್ತಾರೆಯೇ ? ಮಾನ್ಯ ಮುಖ್ಯ ಮಂತ್ರಿಗಳು ಬೆಳಗಾವಿಗೆ ತಮ್ಮ ಪಕ್ಷದ ಸಭೆಗೆ ಹೋಗಿದ್ದಾಗ ಅವರು ಮುಖ್ಯ ಮಂತ್ರಿಗಳಾಗಿ ಹೋಗಿದ್ದರೇ ಅಥವಾ ವೀರೇಂದ್ರ ಪಾಟೀಲ್ ಆಗಿ ಹೋಗಿದ್ದರೆ ? ಅದೇ ರೀತಿ ಪ್ರಧಾನಿಯವರ ಪ್ರವಾಸವೂ ಆಗಿದೆ ಅಲ್ಲವೇ ?

ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಸಿದ್ಧವೀರಪ್ಪನವರು ಹೇಳಿದಹಾಗೆ ಪ್ರಧಾನಿಯವರು ಪ್ರವಾಸವನ್ನು ಕೈಗೊಂಡಾಗ ಪಕ್ಷದ ಕೆಲಸಕ್ಕೆ ಅಥವಾ ಸರ್ಕಾರಿ ಕೆಲಸಕ್ಕೆ ಎಂದು ಬೈಫರ್‌ಕೇಟ್ ಮಾಡುವುದು ಕಷ್ಟ ಎಂದು ನಾನು ಈಗಾಗಲೇ ನುಡಿಯವದಿಂದ ಒಂದು ಸ್ಟೇಟ್‌ಮೆಂಟ್ ಕೊಟ್ಟಿದ್ದೇನೆ. ಪ್ರಧಾನಿಯವರು ಇಲ್ಲಿ ಟೂರ್ ಮಾಡಿದಾಗ ಅಫಿಷಿಯರ್ ಆಗಲೀ, ನಾನ್-ಅಫಿಷಿಯಲ್ ಆಗಲೀ ಅವರು ಪ್ರಧಾನಿಯಾಗಿ ಟೂರ್ ಮಾಡಿದ್ದಾರೆ ಎಂದೂ ನಾನು ಹೇಳಿದ್ದೇನೆ. ಇದನ್ನು ಮಾನ್ಯ ಸದಸ್ಯರು ಒಪ್ಪಿಕೊಂಡರೆ ನನಗೆ ಸ್ವಲ್ಪ ಅನುಕೂಲವಾಗುತ್ತದೆ. ಅನೇಕ ಸಲ ನಾವು ಪಾರ್ಟಿ ಕೆಲಸಕ್ಕೆ ಹೋಗುತ್ತೇವೆ ಎಂದು ಇದೇ ಮನೆಯಲ್ಲಿ ಅನೇಕರು ಬೇಕಾದಷ್ಟು ಟೀಕೆ ಮಾಡಿದ್ದಾರೆ. ಇದರ ಸಲುವಾಗಿ ಪ್ರಧಾನ ಮಂತ್ರಿಗಳು ಅಫಿಷಿಯಲ್ ಟೂರ್ ಬರಲಿ, ನಾನ್-ಅಫಿಷಿಯಲ್ ಟೂರ್ ಬರಲಿ ಪ್ರೈವೇಟ್ ಟೂರ್ ಬರಲಿ ಅವರು ಬಂದಾಗ ಸೆಕ್ಯೂರಿಟಿ ಅರೇಂಜ್

(ಶ್ರೀ ವೀರೇಂದ್ರ ಪಾಟೀಲ್)

ಮೆಂಟ್ಸ್ ಮಾಡುವ ಜವಾಬ್ದಾರಿ ನಮ್ಮ ಮೇಲೆ ಇದೆ. ಅದನ್ನು ಮಾಡಬೇಕಾಗುತ್ತದೆ. ಮಾನ್ಯ ಸಿದ್ದವೀರಪ್ಪನವರು ನಾವು ಪಾರ್ಟಿ ಕೆಲಸಕ್ಕೆ ಬೆಳಗಾವಿಗೆ ಹೋಗಿದ್ದೇನೆ ಎಂದು ಹೇಳಿದರು. ನಾನು ಸ್ಪಷ್ಟವಾಗಿ ಹೇಳುತ್ತೇನೆ ನಾನು ಬೆಳಗಾವಿಗೆ ಪಾರ್ಟಿ ಮೀಟಿಂಗಿಗೆ ಹೋದರೂ ಕೂಡ ಸರ್ಕಾರದ ಮೇಲೆ ಒಂದು ಸ್ವಲ್ಪವೂ ಭಾರ ಹಾಕದಂತೆ ನನ್ನ ಕೈಯಿಂದಲೇ ಖರ್ಚು ಹಾಕಿಕೊಂಡು ಹೋಗಿ ಬಂದಿದ್ದೇನೆ. ಮುಖ್ಯ ಮಂತ್ರಿಗಳು ಪಾರ್ಟಿ ಕೆಲಸಕ್ಕೆ ಹೋಗುವಂತಹ ಅರ್ಹತೆ ಇದೆ. ಆ ಒಂದು ಅಧಿಕಾರವೂ ನನಗೆ ಇದೆ. ಅವರೆ ಒಂದು ನಿದರ್ಶನ ಕೊಟ್ಟರೆ ಬಹುಶಃ ಕಷ್ಟವಾಗಬಹುದೂ ಎನಿಸುತ್ತದೆ. ಅದು ಏಕೆಂದರೆ ಪ್ರಧಾನಿಯವರು ದೇಶದ ಪ್ರಧಾನಿಯಾಗಿರುವುದರಿಂದ ಅವರು ಎಲ್ಲಿಬೇಕಾದರೂ ಕುಳಿತುಕೊಂಡು ಏನಾದರೂ ಮಾಡಿಕೊಳ್ಳಬಹುದೇ ಎನ್ನುವ ವಿಚಾರ ಬರುತ್ತದೆ. ಇವೊತ್ತು ಯಾರೇ ಮುಖ್ಯ ಮಂತ್ರಿಗಳು ಎರ್ಲಾದರೂ ಹೋದರೆ ಅವರಿಗೆ ಸೆಕ್ಯುರಿಟಿ ಕೊಡುವಂತಹ ಜವಾಬ್ದಾರಿ ಪೋಲೀಸಿನವರಿಗೆ ಇರುತ್ತದೆ. ಅವರು ಎರ್ಲಾದರೂ ಹೋದರೆ ಖರ್ಚು ಕೊಟ್ಟು ಹೋಗಬೇಕು ಎನ್ನುವಂಥಾದ್ದಲ್ಲ.

9-30 A.M.

ಅದಕ್ಕಾಗಿ ನಾವು ಪ್ರಧಾನಮಂತ್ರಿಯವರು ಟೂರ್ ಮಾಡುವ ಮುನ್ನ ಸರ್ಕಾರದವರು ಏನೇನು ಕಾರ್ಯಕ್ರಮ ಕೈಕೊಳ್ಳಬೇಕೋ ಅದನ್ನು ಕೈಕೊಳ್ಳುತ್ತೇವೆ ಮತ್ತು ಅನೇಕ ವರ್ಷಗಳಿಂದ ಏನು ಪದ್ಧತಿ ನಡೆದುಕೊಂಡು ಬಂದಿದೆಯೋ ಅದೇ ಪದ್ಧತಿಯನ್ನು ನಾವು ಅನುಸರಿಸುತ್ತಿದ್ದೇವೆ. ಮಾನ್ಯ ಸದಸ್ಯರು ಗದಗ್ ಕಾಟನ್ ಕೊ-ಆಪರೇಟಿವ್ ಸೊಸೈಟಿಯ ಬಗ್ಗೆ ಕೇಳಿದ್ದಾರೆ. ಈ ಬಗ್ಗೆ ಈಗಾಗಲೇ ಹೇಳಿದ್ದೇನೆ. ನಾವು ಸರ್ಕಾರಿ ಫಂಕ್ಷನ್ ಏನೇನು ನಮೂದು ಮಾಡಿದ್ದೇವೋ ಅದರಲ್ಲಿ ಒಂದು ಮಾತ್ರ ಒಪ್ಪಿಕೊಂಡಿದ್ದರು ಏಂಬುದಾಗಿ ಈಗಾಗಲೇ ಹೇಳಿದ್ದೇನೆ. ಆದ್ದರಿಂದ ಗದಗಿನ ಕಾಟನ್ ಕೊ-ಆಪರೇಟಿವ್ ಫಂಕ್ಷನ್ ಸರ್ಕಾರೀ ಫಂಕ್ಷನ್ ಆಗುತ್ತದೆಯೇ ಏಂಬುದು ಮಾನ್ಯ ಸದಸ್ಯರಿಗೇ ಗೊತ್ತಿದೆ.

Sri D. B. KALMANKAR.—Is it a fact that the Government had issued instructions to local officers and also the Congress MLAs to see that her tour becomes a failure ?

Sri VEERENDRA PATIL.—It is an insinuation, Sir. I do not know what prompted the hon. Member to put such a question. We are not here to do these things. I think it is most unfair on the part of the hon. Member to put such a question.

Mr. SPEAKER.—Now next question.

(Several members rose in their seats to put supplementaries)

If hon Members feel that other questions are not important and this question should be given all the time, I have no objection. But I must tell the hon. members that I will not extend the question hour even by a minute and so the other questions will lapse.

Sri G. DUGGAPPA.—Is it a fact that the Deputy Commissioner, Tumkur District issued notices to the Secretary Ad-hoc Congress (R) to make good the expenditure in connection with the tour of the Prime Minister in that district, and if so, what is the amount ?

Sri VEERENDRA PATIL.—I do not know what notice the Deputy Commissioner has issued to the Secretary, District Congress Committee belonging to their organisation. So far as the tour of the Prime Minister is concerned, the State Government has acted strictly in accordance with the instructions issued in this behalf. I want to tell

the hon. Members for their information that whenever the Prime Minister tours a State in her private capacity or in her official capacity, the responsibility of the State Government is to make security arrangements to incur expenditure on security arrangements, boarding, lodging and travelling. If any organisation wants the Prime Minister to address their meeting, there also construction of the dais and making all preparations will be done by the police authorities or the Government and that expenditure will be reimbursed by that organisation. This is not the first time, Sir. When the late Panditji toured the State, last time during 1967 elections and Prime Minister Indira Gandhi toured the State, whenever she went to any private organisation or political meeting arranged by any party, all that expenditure that was incurred in connection with the meeting, namely, construction of dais, etc., was met only by the respective organisations. I think we have issued notices to those organisations to reimburse the amount and make the payment in full. That is the instruction issued from the Government of India. I want to assure the House that whatever our officers have done and are doing, and whatever notices are issued by our officers, they are strictly in accordance with the instructions that we received from the Government of India.

ಶ್ರೀ ಎಲ್. ಶ್ರೀಕಂಠಯ್ಯ.—ಇನ್ನು ಮುಂದೆ ಕೇಂದ್ರಸರ್ಕಾರದಲ್ಲಿ ಯಾವ ಬಣದ ಪ್ರಧಾನ ಮಂತ್ರಿಯೇ ಇರಲಿ ಅವರು ಯಾವ ರಾಜ್ಯಕ್ಕೆ ಟೂರ್ ಹೋಗಲಿ ಅವರಿಗಾಗಿ ಸೆಕ್ಯುರಿಟಿ ಮೇಜರ್ಸಿಗೆ ಏನು ಖರ್ಚು ಆಗುತ್ತದೋ, ಆ ಖರ್ಚನ್ನೆಲ್ಲಾ ಅವರಿಂದಲೇ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೀರಾ?

ಶ್ರೀ ವೀರೇಂದ್ರ ಪಾಟೀಲ್.—ಅದು ಕಷ್ಟವಾಗುತ್ತದೆ. ಸೆಕ್ಯುರಿಟಿಗಾಗಿ ಆಗತಕ್ಕಂಥ ಖರ್ಚು ನೀವೇ ಕೊಡಿ ಎಂದು ಕೇಳುವುದು ಕಷ್ಟವಾಗುತ್ತದೆ, ಬಹುಶಃ ಇದನ್ನೆಲ್ಲಾ ಪಾರ್ಲಿಮೆಂಟ್ ಮುಂದೆ ಇಟ್ಟು ನಿರ್ಣಯಮಾಡಬೇಕಾಗುತ್ತದೆ ಮತ್ತು ಇದು ಕೇಂದ್ರ ಸರ್ಕಾರದ ಪ್ರಶ್ನೆಯಾಗುತ್ತದೆ. ಈಗ ನಮ್ಮವರು ಪ್ರಧಾನಮಂತ್ರಿಯಾಗಿಲ್ಲವೆಂಬ ಕಾರಣದಿಂದ ಖರ್ಚನ್ನೆಲ್ಲಾ ನೀವೇ ಕೊಡಿ ಎಂದು ಹೇಳುವುದು ಕಷ್ಟವಾಗುತ್ತದೆ.

ಶ್ರೀ ಎಚ್. ಎನ್. ನಂಜೇಗೌಡ.—ಪ್ರಧಾನಮಂತ್ರಿಯವರು ಖಾನಗಿಯಾಗಿ ಭೇಟಿ ಕೊಟ್ಟ ಕಡೆ ಯಾವ ಪಾರ್ಟಿಯವರು ಫಂಕ್ಷನ್ ಏರ್ಪಾಡು ಮಾಡಿರುತ್ತಾರೋ ಅದರ ಖರ್ಚನ್ನು ಆ ಪಾರ್ಟಿಯವರೆ ವಹಿಸಿಕೊಳ್ಳಬೇಕಾಗುತ್ತದೆಂದು ಈಗತಾನೇ ಹೇಳಿದಿರಿ. ಮತ್ತು ಆದೇ ಪ್ರಕಾರ ಈಗ ತುಮಕೂರಿನ ಜಿಲ್ಲಾಧಿಕಾರಿಯವರು ಕಾಂಗ್ರೆಸ್ (ಆರ್) ಪಾರ್ಟಿಯವರಿಗೆ ಐದಾರು ಐಟಂಮ್ಸು ಬಗ್ಗೆ ಖರ್ಚು ಕೊಡಬೇಕೆಂದು ನೋಟೀಸ್ ಕೊಟ್ಟಿದ್ದಾರೆ. ಮತ್ತು ಸರ್ಕಾರದ ಆದೇಶದ ಪ್ರಕಾರ ಕೊಡಲಾಗಿದೆ ಎಂದು ಹೇಳಿದ್ದಾರೆ. ಒಂದು ಪಕ್ಷ ಆ ಖರ್ಚನ್ನು ಕೊಡದಿದ್ದರೆ ಆ ಪಾರ್ಟಿಯವರ ಮೇಲೆ ದಾವಾ ಹಾಕುತ್ತೀರಾ? ಹಿಂದೆ ನಿಮ್ಮ ಪಾರ್ಟಿಯವರೇ ಇಂತಹ ಖರ್ಚುಗಳನ್ನು ಕೊಡದಿದ್ದಾಗ ಕೋರ್ಟಿಗೆ ಹೋಗಿ ದಾವಾ ಹಾಕಿದ್ದೀರಾ ಎಂಬುದನ್ನು ತಿಳಿಸಬೇಕು?

ಶ್ರೀ ವೀರೇಂದ್ರ ಪಾಟೀಲ್.—ಇದಕ್ಕೆ ನಾನು ಹೇಳುತ್ತಿರುವುದು ಮಾನ್ಯ ಸದಸ್ಯರು ಹೇಳುವುದನ್ನೆಲ್ಲಾ ಒಪ್ಪಬಹುದು. ಮಾನ್ಯ ಸದಸ್ಯರು ಹೇಳಿದಂತೆ ಹಿಂದೆ 1967 ರಲ್ಲಿ ಪ್ರೈಂ ಮಿನಿಸ್ಟರು ಬಂದಾಗ ಅವರೇನು ಪಕ್ಷದ ವತಿಯಿಂದ ಬಂದು ಇಲ್ಲಿ ಕೆಲಸ ಮಾಡಿದ್ದಾರೆ ಆಗ ಅವರಿಗಾಗಿ ಖರ್ಚು ಮಾಡಿರುವುದನ್ನು ಪಕ್ಷದ ಕಡೆಯಿಂದ ವಸೂಲು ಮಾಡಿದ್ದೇವೆ. ಇಲ್ಲೂ ಅದೇ ರೀತಿ ಆಗಿದ್ದರೆ ಆಗಲೂ ವಸೂಲು ಮಾಡಲು ಪ್ರಯತ್ನ ಮಾಡುತ್ತೇವೆ. ಅಧಿಕಾರಿಗಳಿಗೆ ಏನು ಇನ್ಸ್ಟ್ರಕ್ಷನ್‌ಗಳನ್ನು ಕೊಡಬೇಕೋ ಅವನ್ನೆಲ್ಲಾ ಪೂರ್ತಿಯಾಗಿ ಕಳುಹಿಸಿ ಕೊಟ್ಟಿದ್ದೇವೆ. ಪ್ರಧಾನ ಮಂತ್ರಿಗಳು ಟೂರು ಮಾಡುವ ಕಾಲದಲ್ಲಿ ಅಧಿಕಾರಿಗಳ ಜವಾಬುದಾರಿ ಏನಿದೆ ಅದನ್ನು ಕೇಂದ್ರ ಸರಕಾರದವರು ಕಳುಹಿಸಿಕೊಟ್ಟಿರುವ ನಿಯಮಗಳ 'ಪ್ರಕಾರವೇ ಕಳುಹಿಸಿ ಕೊಡಲಾಗಿದೆ. ಇದರ ಪ್ರಕಾರ ಅವರು ಇಲ್ಲಿ ನೋಡಿಕೊಳ್ಳುತ್ತಾರೆ. ಇಲ್ಲಿ ಕೊಟ್ಟಿರುವ ಇನ್ಸ್ಟ್ರಕ್ಷನ್ ಪ್ರಕಾರ ಪಾರ್ಟಿಕೆಲಸಗಳಿಗಾಗಿ

(ಶ್ರೀ ವೀರೇಂದ್ರ ಪಾಟೀಲ್)

ಬಂದಾಗ ಸರಕಾರದವರು ಇದರ ಖರ್ಚು ಕೊಡಬೇಕೆಂದು ಯಾರೂ ಕೇಳಲಾರರು. ಯಾವ ಪಾರ್ಟಿಯವರೇ ಆಗಲೀ ಅವರ ಸಭೆಗಾಗಿ ಪ್ರಧಾನ ಮಂತ್ರಿಗಳು ಬಂದಾಗ ಅದಕ್ಕೆ ಖರ್ಚು ಮಾಡಿರುವುದನ್ನು ಸರಕಾರಕ್ಕೆ ಅವರು ಕೊಡುವುದು ಧರ್ಮ. ಹಾಗೇನಾದರೂ ಕೊಡಲಾರದಿದ್ದರೆ, ಕಾನೂನು ಪ್ರಕಾರ ಏನು ಮಾಡಬಹುದೋ ಅದನ್ನು ಮಾಡಬೇಕಾಗುತ್ತದೆ. ಮತ್ತು ಕ್ರಮೇಣ ಏನು ಕಾರ್ಯಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳಬೇಕಾಗುತ್ತದೆ. ಇದಕ್ಕೆ ಆಯಾ ಅರ್ಗನೈಸೇಷನ್‌ನವರು ದುಡ್ಡು ಕೊಟ್ಟರೆ ಈ ಚಾಪ್ಟರು ಮುಗಿದಂತಾಗುತ್ತದೆ.

ಶ್ರೀ ಬಿ. ಗಂಗಣ್ಣ.—ಪ್ರಧಾನ ಮಂತ್ರಿಗಳು ತುಮಕೂರಿನಲ್ಲಿ ಈಚೆಗೆ ಬಂದಿದ್ದಾಗ ಸರಕಾರದ ಪರವಾಗಿ ಇಲ್ಲಿನ ಜಿಲ್ಲಾಧಿಕಾರಿಗಳು ಏನು ಖರ್ಚು ಮಾಡಿದರೋ ಅದನ್ನು ಇಲ್ಲಿನ ಕಾಂಗ್ರೆಸ್ (ಆರ್) ಪಕ್ಷದ ಸೆಕ್ರೆಟರಿಗಳು ಕೊಡಬೇಕೆಂದು ಇವರಿಗೆ ನೋಟೀಸು ಕೊಟ್ಟಿದ್ದಾರೋ ಏನೋ ಇದರ ಸಂಬಂಧವಾದ ವಿಚಾರಗಳು ನನಗೆ ಗೊತ್ತಿಲ್ಲ. ಜಿಲ್ಲಾಧಿಕಾರಿಗಳೇ ಸರಕಾರದ ಪರವಾಗಿ ಡಯಾಸ್ ಇತ್ಯಾದಿಗಳನ್ನೆಲ್ಲಾ ಏರ್ಪಾಡು ಮಾಡಿ ಇದರ ಖರ್ಚು ವೆಚ್ಚಗಳನ್ನು ಆಯಾ ಪಕ್ಷದವರ ಕಡೆಯಿಂದ ತೆಗೆದುಕೊಳ್ಳಬೇಕು ಎಂದು ನಿಯಮ ಇದೆ. ಇದನ್ನು ಆಗರೇ ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ್ದಾರೆ. ಇದರಂತೆ ಇಲ್ಲಾ ಕಾರ್ಯಕ್ರಮಗಳೆಲ್ಲಾ ಮುಗಿದ ಮೇಲೆ ಇಲ್ಲಿನ ಜಿಲ್ಲಾಧಿಕಾರಿಗಳು ಸರಕಾರಕ್ಕೆ ಇದರ ಬಗ್ಗೆ ಎಲ್ಲ ವಿವರಗಳನ್ನೂ ತಿಳಿಸಿರುವುದು ಸರಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ವೀರೇಂದ್ರ ಪಾಟೀಲ್.—ನಾನೂ ಅದೇ ಹೇಳಿದೆ. ಇದರಲ್ಲಿ ಕಾಂಗ್ರೆಸ್ (ಆರ್) ಪಾರ್ಟಿಯೇ ಆಗಲೀ ಅಥವಾ ಬೇರೆ ಯಾವ ಪಾರ್ಟಿಯೇ ಆಗಲೀ ಪೆ ೞಂ ಮಿನಿಸ್ಟರು ಬಂದಾಗ ಅವರು ಭಾಗವಹಿಸುವ ಪಬ್ಲಿಕ್ ಮೀಟಿಂಗು ಮಾಡಬೇಕು ಎಂದರೆ ಅಲ್ಲಿ ಬೇಕಾಗುವ ಡಯಾಸ್ ಇತ್ಯಾದಿಗಳನ್ನು ಮಾಡುವಾಗ ಸೆಕ್ಯೂರಿಟಿ ಪಾಯಿಂಟ್ ಆಫ್ ವ್ಯೂ ಪ್ರಕಾರ ಏನೇನು ಮಾಡಬೇಕೆನ್ನುವುದನ್ನು ಕೇಂದ್ರ ಸರಕಾರದವರೂ ಹೇಳಿದ್ದಾರೆ. ಇಲ್ಲೂ ಕೂಡ ಪಬ್ಲಿಕ್ ಮೀಟಿಂಗು ಮಾಡುವಾಗ ಯಾವ ಅನುಕೂಲಗಳನ್ನು ಕಲ್ಪಿಸಿಕೊಡಬೇಕು, ಇದನ್ನು ಯಾವ ರೀತಿ ಕೊಡಬೇಕು ಎನ್ನುವ ನಿಯಮಗಳಿವೆ. ಇದರಂತೆ ನಮ್ಮ ಅಧಿಕಾರಿಗಳು ಇಲ್ಲಿ ಖರ್ಚು ಮಾಡಿ ಆ ನಂತರ ಅದನ್ನು ತುಂಬಿಸಿಕೊಂಡಿರುತ್ತಾರೆ.

ಶ್ರೀ ಎಸ್. ಶಿವಪ್ಪ.—ಈಚೆಗೆ ಕಾಂಗ್ರೆಸ್ ಇಬ್ಭಾಗವಾಗಿರುವುದರಿಂದ ಇವೆರಡು ಪಕ್ಷಗಳ ಬಣ್ಣ ಯಾವ ರೀತಿ ಇದೆ ಎನ್ನುವುದು ಬೇರೆ ಬೇರೆಯಾಗಿ ಜನರ ಮುಂದೆ ಬರುತ್ತಿದೆ. ಇದು ಬಹಳ ಸಂತೋಷದ ವಿಚಾರ. ಪ್ರಧಾನ ಮಂತ್ರಿಗಳಾದ ಶ್ರೀಮತಿ ಇಂದಿರಾ ಗಾಂಧಿಯವರು ಬಂದಾಗ ಹಾಗೂ ಶ್ರೀಮಾನ್ ನಿಜಲಿಂಗಪ್ಪನವರು ಕಾಂಗ್ರೆಸ್ ಪಕ್ಷದ ಕೆಲಸಗಳಿಗಾಗಿ ಬಂದಾಗ ಇವರು ದೆಹಲಿಯಿಂದ ಬಂದು ಇಲ್ಲಿ ತಂಗುತ್ತಾರೆ. ಆಗ ಇವರಿಗಾಗಿ ಸರಕಾರ ಖರ್ಚು ಮಾಡಿರುವುದನ್ನು ಅವರ ಪಕ್ಷ ಎಂದರೆ ಕಾಂಗ್ರೆಸ್ ಪಾರ್ಟಿಯವರಿಂದ ವಸೂಲು ಮಾಡಲು ಏನೇನು ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದೀರಿ ?

ಶ್ರೀ ವೀರೇಂದ್ರ ಪಾಟೀಲ್.—ಶ್ರೀಮಾನ್ ನಿಜಲಿಂಗಪ್ಪನವರು ಯಾವಾಗಲೂ ಪ್ರಧಾನ ಮಂತ್ರಿಗಳಾಗಿರಲಿಲ್ಲ. ಅವರು ಪಕ್ಷದ ವತಿಯಿಂದ ಇಲ್ಲಿಗೆ ಬಂದಾಗ ಸರಕಾರ ಇವರ ಖರ್ಚನ್ನು ವಹಿಸಿಕೊಳ್ಳುವುದೂ ಇಲ್ಲ ಮತ್ತು ಇಂತಹ ಖರ್ಚನ್ನು ತೆಗೆದುಕೊಳ್ಳುವುದೂ ಇಲ್ಲ. ಆದರೆ ಅವರೇನಾದರೂ ಗೆಸ್ಟ್ ಹೌಸಿನಲ್ಲಿಳಿದುಕೊಂಡು ಇದ್ದರೆ ಅಲ್ಲಿ ಚಾರ್ಜು ಮಾಡುವ ಬಿಲ್ಲುಗಳ ಪ್ರಕಾರ ಪೇಮೆಂಟು ಮಾಡಿರುತ್ತಾರೆ. ಬಹುಶಃ ಅವರ ಹೆಸರಿನಲ್ಲಿ ಯಾವ ಬಿಲ್ಲಿನ ಹಣವೂ ಬಾಕಿ ಇರಲಾರದು. ಒಂದು ವೇಳೆ ನಿಂತಿದ್ದರೆ ಅವರ ಪರವಾಗಿ ಜವಾಬುದಾರಿ ತೆಗೆದುಕೊಳ್ಳುತ್ತೇನೆ. ಅವರಿಂದ ಏನಾದರೂ ಬಾಕಿ ಬಿಲ್ಲುಗಳು ಪೇಮೆಂಟು ಆಗದೇ ನಿಂತಿದ್ದರೆ ಅದನ್ನು ಕೊಡಿಸಿಕೊಡುವ ಜವಾಬುದಾರಿಯನ್ನೂ ತೆಗೆದುಕೊಳ್ಳುತ್ತೇನೆ. ಇನ್ನೊಂದು ವಿಚಾರ ಎಂದರೆ ಪ್ರಧಾನಿಗಳು ಟೂರು ಬಂದಾಗ ಏನು ಖರ್ಚಾಗಿರುತ್ತದೋ ಅವರು ಪಕ್ಷದ ವತಿಯಿಂದ ಬಂದಿದ್ದು ಅದಕ್ಕಾಗಿ ಸರಕಾರ ಖರ್ಚು ಮಾಡಿದ್ದರೆ ಅಂತಹ ಹಣವನ್ನು ಆ ಪಕ್ಷದ ಮೂಲಕ ಕೊಡುತ್ತಾರೆಂದು ನಂಬಿಕೆ ಇದೆ, ಇಂತಹ ಸತ್ಸಂಪ್ರದಾಯವನ್ನು ಬೆಳೆಸಬೇಕು. ಇಲ್ಲದೆ ಹೋದರೆ ಮುಂದೆ ಇದು ಸ್ವಲ್ಪ ಕಷ್ಟವಾಗುತ್ತದೆ.

ಶ್ರೀ ಕೆ. ಎಚ್. ಶ್ರೀನಿವಾಸ.—ಪ್ರಧಾನ ಮಂತ್ರಿಗಳು ಈಚೆಗೆ ಬಂದಿದ್ದಾಗ ಗ್ರಾಮಾಂತರ ಪ್ರದೇಶಗಳಲ್ಲಿ ಪ್ರವಾಸ ಮಾಡಿದಾಗ ಪಬ್ಲಿಕ್ ಮೀಟಿಂಗು ಮಾಡಿದಾಗ ಸರಕಾರದವರು ಯಾವ ಅನುಕೂಲವನ್ನೂ ಮಾಡಿಕೊಟ್ಟಿರಲಿಲ್ಲ. ನನಗೆ ತಿಳಿದಂತೆ ಒಂದು ಸ್ಥಳದಲ್ಲಿ ಎಂದರೆ ಗಂಗಾವತಿ

ಯಲ್ಲಿ ಒಬ್ಬರು ಎಕ್ಸ್‌ಟೆನ್ಷನ್ ಕಂಟ್ರಾಕ್ಟರ್‌ರವರ ಮನೆಯಲ್ಲಿ ಚಹಾಪಾನಕ್ಕೆ ಬಂದಿದ್ದಾಗ ಅವರ ಮನೆಯ ಮಹಡಿ ಮೇಲೇ ನಿಂತು ಭಾಷಣ ಮಾಡಿರುವುದು ನಿಜವೇ ?

ಶ್ರೀ ವೀರೇಂದ್ರ ಪಾಟೀಲ್.—ಗಂಗಾವತಿ ಎಂಬ ಊರು ಅವರ ಪ್ರವಾಸದ ಪಟ್ಟಿಯಲ್ಲಿ ಸೇರಿರಲಿಲ್ಲ. ಆದರೆ ಮಾನ್ಯ ಸದಸ್ಯರು ಹೇಳಿದಂತೆ ಅಲ್ಲಿ ಯಾರೋ ಒಬ್ಬರು ಎಕ್ಸ್‌ಟೆನ್ಷನ್ ಕಂಟ್ರಾಕ್ಟರು ಇದ್ದರು ಅವರ ಮನೆಗೆ ಹೋಗಿದರು ಎಂದು ನಾನೂ ಕೇಳಿದ್ದೇನೆ. ಮತ್ತು ನನಗೂ ವರದಿಗಳು ಬಂದಿವೆ. ಇದಕ್ಕಿಂತ ಹೆಚ್ಚಿಗೆ ಏನೂ ಹೇಳುವುದಕ್ಕಾಗುವುದಿಲ್ಲ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಪ್ರಧಾನ ಮಂತ್ರಿಗಳು ಬಂದಾಗ ಅವರು ಸಾರ್ವಜನಿಕ ಸಭೆಗಳಲ್ಲಿ ಯಾವುದಾದರೂ ಪಕ್ಷದ ಕಾರ್ಯಕ್ರಮಕ್ಕೆ ಬಂದಾಗ ಅವರಿಗೆ ಅಗತ್ಯವಾಗಿ ರಾಜ್ಯ ಸರ ಕಾರ ಏನೇನು ಅನುಕೂಲಗಳನ್ನು ಎಂದರೆ ಸೆಕ್ಯೂರಿಟಿ ಕ್ರಮಗಳನ್ನು ಅನುಸರಿಸುವಾಗ ಇವರಿಗೇ ಒಂದು ತತ್ವವನ್ನು ಅನುಸರಿಸುತ್ತಾರೆ. ಇದೇ ರೀತಿ ಕೇಂದ್ರ ಸರಕಾರದ ಮಂತ್ರಿಗಳು ಬಂದಾಗ ಒಂದು ತತ್ವ ಅನುಸರಿಸುತ್ತಾರೆ. ಈಚೆಗೆ ಕೇಂದ್ರ ಮಂತ್ರಿಗಳಾದ ಶ್ರೀ ಹನುಮಂತಯ್ಯನವರು ಬಂದಿದ್ದಾಗ ಇದಕ್ಕೆ ತದ್ವಿರುದ್ಧವಾಗಿ ಅವರಿಗೆ ಕೊಡಬೇಕಾದ ಸೌಲಭ್ಯಗಳನ್ನು ವಾಪಸು ಪಡೆಯು ರಾಗುತ್ತದೆ ಎಂದು ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ್ದಾರೆ. ಹೀಗೆ ಒಬ್ಬರಿಗೆ ಒಂದು ತತ್ವ ಇನ್ನೊಬ್ಬರಿಗೆ ಒಂದು ತತ್ವ ಎಂದು ಏಕೆ ಅನುಸರಿಸಬೇಕು ?

ಶ್ರೀ ವೀರೇಂದ್ರ ಪಾಟೀರ್.—ಪ್ರಧಾನ ಮಂತ್ರಿಗಳು ಟೂರು ಮಾಡುವಾಗ ಏನೇನು ಮಾಡ ಬೇಕೋ ಅವೆಲ್ಲಾ ಬಹುಶಃ ಕೇಂದ್ರ ಸರಕಾರವೇ ಕೊಟ್ಟಿರುವ ಇನ್‌ಸ್ಟ್ರಕ್ಷನ್ಸ್ ಪ್ರಕಾರ ಎಂದರೆ ಅವರೇ ಕಳುಹಿಸಿರುವ ಬ್ಲೂ ಬುಕ್ ಏನ್ನುತ್ತಾರೆ, ಇದರ ಪ್ರಕಾರ ಎಲ್ಲ ಅವಶ್ಯವಾದ ಕಾರ್ಯ ಕ್ರಮಗಳನ್ನೆಲ್ಲಾ ತೆಗೆದುಕೊಳ್ಳುತ್ತಾರೆ. ಇದರಂತೆ ಕೇಂದ್ರ ಮಂತ್ರಿಗಳು ಬಂದಾಗ ಏನು ಮಾಡ ಬೇಕು ಎನ್ನುವುದಕ್ಕೂ ಸೂಚನೆಗಳಿವೆ. ಪ್ರಧಾನ ಮಂತ್ರಿಗಳಿಗೇ ಕೊಟ್ಟ ಸ್ಥಾನಮಾನಗಳಂತೆ ಇತರ ಕೇಂದ್ರದ ಮಂತ್ರಿಗಳಿಗೂ ಕೊಡಬೇಕು ಎನ್ನುವುದನ್ನು ಒಪ್ಪುವುದಕಾಗುವುದಿಲ್ಲ. ಇದರಲ್ಲಿ ಯಾರೇ ಆಗಲೀ ಪಕ್ಷದ ಸಲುವಾಗಿ ಬಂದರೆ ಪ್ರಧಾನ ಮಂತ್ರಿಗಳ ಸ್ಥಾನಮಾನವೇ ಬೇರೆ, ಇತರ ಕೇಂದ್ರ ಮಂತ್ರಿಗಳ ಸ್ಥಾನ ಮಾನವೇ ಬೇರೆ. ಆದರೆ ಕರ್ಟಸಿಗಾಗಿ ಯಾರೇ ಮಂತ್ರಿಗಳು ಬರಲಿ ಅವರಿಗೆ ಅವಶ್ಯವಾದ ಗೌರವಗಳನ್ನು ಕೊಟ್ಟು ಅವರಿಗಾಗಿ ಖರ್ಚು ಮಾಡಿದರೆ ಅದನ್ನು ಅವರಿಂದ ವಸೂಲು ಮಾಡುತ್ತಾರೆ. ಅನೇಕ ಕಡೆಗಳಲ್ಲಿ ಇದೇ ನೀತಿ ಅನುಸರಿಸುತ್ತಾರೆ. ಮಹಾರಾಷ್ಟ್ರ ರಾಜ್ಯದಲ್ಲಿ ಈಚೆಗೆ ನಾನು ಬೊಂಬಾಯಿಗೆ ಹೋದಾಗ ಅಲ್ಲಿ ಯಾವುದೋ ನವಾರಂಭಕ್ಕೆ ನಾನು ಹೋದಾಗ ನನಗೆ ಹೊತ್ತೇರಿನಲ್ಲಿ ಆದ ವೆಚ್ಚಕ್ಕೆ ಬಿಲ್ಲು ಕೊಟ್ಟರು ಅದರಂತೆ ನಾವು ಕೊಟ್ಟು ಬಂದೆವು. ಶ್ರೀ ಹನುಮಂತಯ್ಯನವರು ಕೇಂದ್ರ ಸರಕಾರದ ಮಂತ್ರಿಗಳಾಗಿ ಬರುತ್ತಾರೆಂದು ಪೇಪರಿನಲ್ಲಿ ಬಂದಿರಬಹುದು. ಇದರಲ್ಲಿ ಕೇಂದ್ರ ಸರಕಾರದ ಮಂತ್ರಿಗಳೇ ಬರಲೀ ಅಥವಾ ಯಾವುದೇ ಮಂತ್ರಿ ಗಳು ಬರಲಿ ಅವರು ತಮ್ಮ ಪಕ್ಷದ ಕೆಲಸಕ್ಕಾಗಿ ಬಂದಾಗ ಇಲ್ಲಿರುವ ಆಳುವ ಪಕ್ಷದ ಮೇಲೆ ಮಣ್ಣೆರ ಚುವುದಕ್ಕಾಗಿ ದೋಷಾರೋಪಣೆಗಳನ್ನು ಮಾಡುವುದು ಎಂದರೆ ಇದು ಸೆಂಟರು ಮತ್ತು ಸ್ಟೇಟು ಗಳ ರಿಲೇಷನ್‌ಗಳು ಮಧುರವಾಗುವುದಿಲ್ಲ. ಉದಾಹರಣೆಯಾಗಿ ಮದ್ರಾಸಿನಲ್ಲಿ ಡಿ. ಎಂ. ಕೆ. ಸರಕಾರ ಇದೆ. ಇಲ್ಲಿಗೆ ಕೇಂದ್ರದ ಮಂತ್ರಿಗಳು ಹೋಗಿ ಆ ಸರಕಾರದ ಮೇಲೆ ದೋಷಾ ರೋಪಣೆ ಮಾಡಿದರೆ ಅದು ಪ್ರಜಾ ರಾಜ್ಯಗಳಿಗೆ ಹಿತಕರವಾಗುವುದಿಲ್ಲ. ಕ್ರಮಬದ್ಧವಾಗಿ ಭಾಷಣ ಮಾಡಬಹುದು. ತಮಗೆ ಬೇಕು ಬೇಕಾದ ಹೇಳಿಕೆಗಳನ್ನು ಕೊಡಬಹುದು ಎಂದರೆ ಅದು ಒಪ್ಪುವುದಕ್ಕಾಗುವುದಿಲ್ಲ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ನಾನು ಪ್ರಶ್ನೆ ಕೇಳಿರುವುದು ಕೇಂದ್ರದ ಮಂತ್ರಿಗಳು ಬಂದಾಗ ಒಂದು ತತ್ವ ಅನುಸರಿಸುವುದು ಮತ್ತು ಪ್ರಧಾನ ಮಂತ್ರಿಗಳು ರಾಜ್ಯಕ್ಕೆ ಬಂದಾಗ ಒಂದು ತತ್ವ ಅನುಸರಿಸುವುದು ಎಂದು, ಹೀಗೆ ಬೇರೆ ಬೇರೆಯಾಗಿ ಸರಕಾರ ನೌಕರ್ಯಗಳನ್ನು ಒದಗಿಸುವುದು ಸರಿಯೇ ?

ಶ್ರೀ ವೀರೇಂದ್ರ ಪಾಟೀಲ್.—ನಾನು ಆಗಲೇ ಇದರ ಬಗ್ಗೆ ವಿವರವಾಗಿ ಹೇಳಿದೆ; ಉದಾಹರಣೆಯಾಗಿ ನಾನು ಇಲ್ಲಿ ಹೇಳಿದ್ದೇನೆ. ಇಲ್ಲಿರುವ ಪ್ರಶ್ನೆ ಕೇಂದ್ರ ಸರಕಾರದ ಮಂತ್ರಿಗಳು ರಾಜ್ಯಕ್ಕೆ ಬಂದಾಗ ಎಷ್ಟುಮಟ್ಟಿಗೆ ಕರ್ಟಸಿಗಾಗಿ ಕೊಡಬಹುದೋ ಅವನ್ನು ಕೊಡಬಹುದು. ಆದರೆ ಇಲ್ಲಿ ಕೇಂದ್ರ ಸರಕಾರದ ಮಂತ್ರಿಯಾಗಿ ಪಕ್ಷದ ಕೆಲಸ ಮಾಡಲು ಬಂದು ರಾಜ್ಯ ಸರಕಾರಕ್ಕೆ ಮಸಿ ಬಳಿಯಬೇಕೆಂದು ಅವರ ಮೇಲೆ ದೋಷಾರೋಪಣೆ ಮಾಡಲು ಪ್ರಾರಂಭ ಮಾಡಿದ್ದಾರೆ. ಇದರಲ್ಲಿ ಯಾವ ರೀತಿ ವರ್ತಿಸಬೇಕು ಮತ್ತು ಇದರಲ್ಲಿ ಅವರ ಜವಾಬುದಾರಿ ಏನು ಎನ್ನುವುದನ್ನು ಗಮನಿಸಬೇಕಾದುದು ನಮ್ಮ ಜವಾಬುದಾರಿ. ಇದರ ಬಗ್ಗೆ ನಾನು ಇನ್ನೂ ಹೆಚ್ಚು ಹೇಳುವುದಕ್ಕಾಗುವುದಿಲ್ಲ.

ಶ್ರೀ ಎಚ್. ಬಿ. ಜ್ಯಾಲನಯ್ಯ.—ಈ ದಿವಸ ಮೈಸೂರು ಸಂಸ್ಥಾನದಲ್ಲಿ ಸಿಂಡಿಕೇಟ್ ಕಾಂಗ್ರೆಸ್ಸಿದೆ. ಕೇಂದ್ರದಲ್ಲಿ (ಆರ್) ಕಾಂಗ್ರೆಸ್ಸಿದೆ. ಈ ರಾಷ್ಟ್ರವನ್ನು ಈ ಎರಡೂ ಸರ್ಕಾರಗಳು ಹಂಚಿಕೊಂಡು ಜನರ ದುಡ್ಡನ್ನು ಅವರ ಪಾರ್ಟಿಗಳನ್ನು ಬಲಪಡಿಸಿಕೊಳ್ಳುವುದಕ್ಕೆ ಉಪಯೋಗ ಮಾಡುತ್ತಿರುವುದರಿಂದ ಇದೇ ರೀತಿಯಾಗಿ ಇತರೇ ಪಕ್ಷಗಳ ಮುಖಂಡರು ಈ ರಾಜ್ಯಕ್ಕೆ ಬಂದಾಗ (ಆರ್) ಕಾಂಗ್ರೆಸ್ಸಿನವರಿಗೆ ಹಾರ ತುರಾಯಿ ಚಪ್ಪರಗಳಿಗೆ ಹಣವನ್ನು ಖರ್ಚುಮಾಡಿದ ಹಾಗೆ, ಅವರಿಗೂ ಖರ್ಚುಮಾಡುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ಇಲ್ಲಗೆ ಬರತಕ್ಕ ಕೇಂದ್ರದ ನಚಿವರು ಅವರು (ಆರ್) ಕಾಂಗ್ರೆಸ್ಸಿಗೇ ಸೇರಿರಲಿ ಅಥವಾ (ಒ) ಕಾಂಗ್ರೆಸ್ಸಿಗೇ ಸೇರಿರಲಿ, ಇಲ್ಲಿ ಆ ಪಕ್ಷದ ಪ್ರಶ್ನೆಯೇ ಉದ್ಭವ ವಾಗುವುದಿಲ್ಲ. ಅವರು ಕೇಂದ್ರ ನರಕಾರದ ಮಂತ್ರಿಗಳೆಂದು ಬರುತ್ತಾರೆ ಅವರಿಗೆ ನೆಕ್ಯೂರಿಟಿ ಬಗ್ಗೆ ಏನು ಅರೇಂಜ್‌ಮೆಂಟುಗಳನ್ನು ಮಾಡಬೇಕೋ ಅವುಗಳನ್ನು ಮಾತ್ರವೇ ಬೇಕು. ಅಷ್ಟೇ ಏನಾ ಇಲ್ಲಿ ಪಕ್ಷದ ಪ್ರಶ್ನೆಯೇ ಇಲ್ಲ. ಆದರೆ ಬೇರೆ ಪಕ್ಷಗಳ ಮುಖಂಡರುಗಳು ರಾಜ್ಯಕ್ಕೆ ಬಂದಾಗ ಅವರು ಇಲ್ಲಿ ಭಾಷಣಕ್ಕೆ ಸ್ಥಳ ಇತ್ಯಾದಿ ಸಾರ್ವಕಾರ್ಯಗಳನ್ನು ಒಂದು ಕರ್ಟಸಿಗಾಗಿ ಒದಗಿಸಬಹುದೇ ಏನಾ ಅವರಿಗೆಲ್ಲರಿಗೂ ಖರ್ಚುಮಾಡುವುದಕ್ಕಾಗುವುದಿಲ್ಲ.

ಶ್ರೀ ಸಿದ್ದಯ್ಯ ಕಾಶೀಮಠ.—ಸ್ವಾಮಿ ಅಧ್ಯಕ್ಷರೇ, ಈ ದಿವಸವೆಲ್ಲಾ ಇದೊಂದೇ ಪ್ರಶ್ನೆಯನ್ನು ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಬೇಕೆಂದಿದ್ದೀರೋ ಅಥವಾ ಬೇರೆ ಪ್ರಶ್ನೆಗಳಿಗೂ ಅವಕಾಶವನ್ನು ಮಾಡಿಕೊಡುತ್ತೀರೋ ?

ಅಧ್ಯಕ್ಷರು.—ಶ್ರೀ ಅಜೀಜ್ ಸೇಟರು ಅವರ ಸಂಪ್ಲಿಮೆಂಟರಿಯನ್ನು ಹಾಕಲಿ, ಅನಂತರ ನೋಡೋಣ.

Sri AZEEZ SAIT.—The Hon. Chief Minister stated that when the Hon. Prime Minister visited Mysore, arrangements were made there for the public meeting. When the Hon. Prime Minister visited Mysore, arrangements for the Public Meeting were made by the Home Department, that is, the Police. I had personally contacted the Departmental persons and even the Chief Secretary. When we stated that the Prime Minister would be addressing a public meeting on behalf of the Congress (R), the Police Department told me that they cannot allow a Party meeting to be addressed by the Prime Minister and all the arrangements for the public meeting would be done by them. Therefore, it is not a public meeting arranged by the Party. The Prime Minister's public meeting was arranged as Prime Minister's public meeting. The Police told us that since it was Prime Minister's public meeting, they would not allow us even to put our Party Flag. They themselves even put the arch. Every arrangement was done by the Police. We were not allowed even to put our flags.

Sri VEERENDRA PATIL.—I do not know what dialogue was there between the hon. Member and the local Police. So far as the construction of the pandal and making arrangements for the public meeting are concerned, it is not the responsibility of the Police Department. It is the responsibility of the Public Works Department; that is the Department which has to do all that in accordance with the instructions that they receive from the Police Department. Simply because, some police officer somewhere has stated something, that cannot alter the position. I have made the position very clear.

ಶ್ರೀ ಸಿ. ಎಂ. ಎಸ್. ಶಾಸ್ತ್ರಿ.—ಇಲ್ಲ ಸರ್ಕಾರದವರು ಪ್ರಧಾನ ಮಂತ್ರಿಯವರ ಒಂದು ಭಟಂ ಬಗ್ಗೆ ಆಗಿರತಕ್ಕ ಖರ್ಚಿನ ವಿವರಗಳನ್ನು ಕೊಟ್ಟಿದ್ದಾರೆ. ಇನ್ನುಳಿದ ಬೇರೆ ಖರ್ಚುಗಳೆಲ್ಲಾ ಸೇರಿದರೆ ಈ ಪೆಚ್ಚು ಇನ್ನೂ ಜಾಸ್ತಿಯಾಗುತ್ತದೆಂಬುದನ್ನು ಮಾನ್ಯ ಮುಖ್ಯ ಮಂತ್ರಿಗಳು ಒಪ್ಪಿ

ಕೊಂಡಿದ್ದಾರೆ, ಆದರೆ ಇದೇ ರೀತಿ ನಮಗೆ ಸ್ವಾತಂತ್ರ್ಯ ಬಂದರಾಗಾಯ್ತು ನಿಂದ ಇಲ್ಲಿಯ ತನಕ ಈ ದಾಖಲೆಯಲ್ಲಿ ಖರ್ಚಾಗಿರತಕ್ಕ ಮೊಬಲಗು ಎಷ್ಟೆಂಬುದನ್ನು ಹೇಳುತ್ತಾರೆಯೇ ?

ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಸದ್ಯರು ಕಳೆದ 23 ವರ್ಷಗಳ ವಿವರಗಳನ್ನು ಕೇಳುತ್ತಿದ್ದಾರೆ. ಮೇರಾಗಿ ಈ ಅವಧಿಯಲ್ಲಿ ಎಷ್ಟೊ ಜನ ಮುಖ್ಯಮಂತ್ರಿಗಳು ಆಗಿ ಹೋಗಿದ್ದಾರೆ. ಅಲ್ಲದೆ ಎಷ್ಟೋ ಜನ ಪ್ರಧಾನ ಮಂತ್ರಿಗಳೂ ಆಗಿ ಹೋಗಿದ್ದಾರೆ. ಆ ವಿವರಗಳನ್ನೆಲ್ಲಾ ನಾನು ಈಗ ಹೇಳುವುದಕ್ಕಾಗುವುದಿಲ್ಲ. ಮೇರಾಗಿ ನಾನು ಇಲ್ಲಿ ಮುಖ್ಯ ಮಂತ್ರಿಯಾಗಿ ಬಂದುದು ಕೇವಲ ಇತ್ತೀಚೆಗೆ.

ಶ್ರೀ ಎಂ. ಕಲ್ಯಾಣರಾವ್.—ಇತರೇ ಸಂಸ್ಥೆಗಳವರೂ ಅವರವರ ಖರ್ಚುಗಳನ್ನು ಕೊಡಬೇಕೆಂದು ಹೇಳಿದ್ದಾರೆ. ಅದರ ಬಗ್ಗೆ ಎಷ್ಟು ಖರ್ಚನ್ನು ಕೊಡಬೇಕೆಂಬುದನ್ನು ಮೊದಲೇ ನಿರ್ಧರಮಾಡಿದ್ದರೆ, ಯಾವ ಯಾವ ಸಂಸ್ಥೆಯಿಂದ ಎಷ್ಟೆಷ್ಟು ಹಣವನ್ನು ವಸೂಲ್ಮಾಡಿದ್ದಾರೆ ?

ಶ್ರೀ ವೀರೇಂದ್ರ ಪಾಟೀಲ್.—ಆ ವಿವರಗಳು ನನ್ನಲ್ಲಿಲ್ಲ.

Sri G. CHANDRAKANTH.—This huge expenditure has been incurred over the Prime Minister's tour when it was, after all, a party tour. This expenditure has been justified by the Government with the intention of meeting the expenditure that the ruling party here is going to incur or has already incurred over the elections to the Taluk Board, etc.

Sri VEERENDRA PATIL.—That is not at all our intention. Whatever Security arrangements we have to make, we have to make; whatever expenditure is incurred has to be paid; I have made it clear. So far as the programme and tour of the Prime Minister was concerned, we have acted strictly in accordance with the instructions we had received from the Government of India.

Sri S. SIVAPPA.—This question involves principles of politics. Now it has been revealed how this Congress Government has misused the State exchequer for the welfare of their own party. We want a discussion on that. You must allow a discussion on it. We want to expose this Government as also the Central Government.

ಶ್ರೀ ಕೆ. ಎನ್. ವೀರಪ್ಪಗೌಡ.—ನಾವು ಜಿಲ್ಲಾಧಿಕಾರಿಗಳು ಹಣವನ್ನು ಕೊಡಬೇಕೆಂದು ಕಳುಹಿಸಿರತಕ್ಕ ಒಂದು ನೋಟೀಸಿನ ಬಗ್ಗೆ ವಿವರಣೆಗಳನ್ನು ಕೇಳಿದ್ದಕ್ಕೆ ಅಧ್ಯಕ್ಷರು ಇಲ್ಲಿ ಪಾರ್ಟಿ ಪಾರ್ಟಿಗಳಿಗೇ ಪೈಮನಸ್ಸನ್ನುತಂದು ಹಾಕತಕ್ಕ ಧಾರಿಯನ್ನು ಮಾಡುತ್ತಿರುವುದು ಖಂಡಿತ ಸರಿಯಾದ್ದಲ್ಲ.....

Mr. SPEAKER.—The Question time is over. Now short notice question.

Question Hour—Definition of

10-00 A.M.

Sri H. N. NANJE GOWDA.—I am on a point of order. ಅಧ್ಯಕ್ಷರೇ, ಈಗ ಕೊಶ್ಚನ್ ಅವರ್ ಈಸ್ ಓವರ್ ಎಂದು ಏನು ಹೇಳಿದರೋ ಅದು ರೂಲ್ ಪ್ರಕಾರ ಇಲ್ಲ. ಮೊದಲು ಒಂದು ಗಂಟೆ ಪ್ರತಿದಿನವೂ ರೆಗ್ಯುಲರ್ ಕೊಶ್ಚನ್ ಲಿಸ್ಟ್‌ನಲ್ಲಿ ಇರುವುದನ್ನು ಕೇಳುತ್ತಾರೆ. ಆದರೆ ಈಗ ತಾವು ಮೊದಲು ತೆಗೆದುಕೊಂಡಿರುವುದು ಹೆರ್ಡ್ ಓವರ್ ಕೊಶ್ಚನ್ಸ್. ಆದುದರಿಂದ ಇದನ್ನು ಕೊಶ್ಚನ್ ಅವರ್ ಈಸ್ ಓವರ್ ಎಂದು ಹೇಳಿಬಿಟ್ಟರೆ ನಮ್ಮ ಹಕ್ಕನ್ನು ಮೊಟಕು ಮಾಡಿದಂತಾಗುತ್ತದೆ. ಈ ಕೊಶ್ಚನ್ ಅವರ್‌ನಲ್ಲಿ ಈ ರೀತಿ ಹೇಳುವುದಕ್ಕಾಗುವುದಿಲ್ಲ. ಹೆರ್ಡ್ ಓವರ್ ಕೊಶ್ಚನ್‌ಗೆ ಟೈಂ ಲಿಮಿಟ್ ಇಲ್ಲ. ಆದರಲ್ಲಿ 2 ಕೊಶ್ಚನ್ ತೆಗೆದುಕೊಂಡು

(Sri H. N. NANJE GOWDA)

ಇನ್ನು 7 ಕೊಶ್ಚನ್ನನ್ನು ಬಿಟ್ಟುಬಿಟ್ಟರೆ ಹೇಗೆ? ಮಂತ್ರಿಗಳಿಗೆ ಅನುಕೂಲವಾಗಲಿ ಎಂದು ಪ್ರಶ್ನೆಯನ್ನು ಹೋಲ್ಡ್ ಓವರ್ ಮಾಡಿದರೆ, ಅದು ಸರಿಯಲ್ಲ. ಹೆಲ್ಡ್ ಓವರ್ ಕೊಶ್ಚನ್‌ಗೆ ಉತ್ತರ ಪಡೆಯುವ ಅಧಿಕಾರ ನಮಗೆ ಇದೆ. ಅದನ್ನು ತಾವು ತಪ್ಪಿಸುವುದಕಾಗುವುದಿಲ್ಲ. ಆದುದರಿಂದ ಈಗ ಪ್ರಶ್ನೋತ್ತರಗಳ ವೇಳೆ ಮುಗಿಯಿತು ಅಂತ ಹೇಳುವುದು ತಪ್ಪಾಗುತ್ತದೆ. ರೂಲ್ಸ್ ಪ್ರಕಾರ ಸರಿಯಾಗಿಲ್ಲ. ತಾವು ಹೆಲ್ಡ್ ಓವರ್ ಕೊಶ್ಚನ್ನನ್ನು ತೆಗೆದುಕೊಳ್ಳಬೇಕು. ರೆಗ್ಯುಲರ್ ಕೊಶ್ಚನ್ ನಂತೆ ಕೊಡುವ ಕಾಲ ಪರಿಮಿತಿ ಒಂದು ಗಂಟೆ ಏನು ಇದೆಯೋ ಅದು ಇವಕ್ಕೆ ಅಪ್ಲೈ ಆಗುವುದಿಲ್ಲ. ನಾನು ಈಗ ಹೇಳಿದ್ದಕ್ಕೆ ಉತ್ತರ ಕೊಡಿಸಬೇಕು ಎಂದು ಹೇಳುತ್ತೇನೆ.

Mr. SPEAKER.—Will the hon. Member quote the rule?

Sri H. N. NANJE GOWDA.—Under rule 311, If you declare this to be Question Hour, it is not in order. Because Question Hour is meant for taking up regular questions. When you took up those held over Questions it was not a Question Hour.

Sri M. NAGAPPA.—I raise a point of order under rule 311 read with rules 32 and 41. Since the Speaker has violated rules 32 and 41, the point of order is on these lines.

Rule 32 reads like this:

> "Unless the Speaker otherwise directs, the first hour of every day of meeting shall be available for the asking and answering of questions.

The first hour will be for asking questions and answering.
Rule 41 says which are the questions and answers that are to be entered in the List of Business. It says:

> "As and when replies to questions for oral answer have been received from the Government, the Secretary shall prepare lists of questions and answers thereto. Copies of such lists shall be supplied to each member two hours before the commencement of the meeting on the day on which any entry about question has been made in the list of business for the day."

Therefore, I request the Chair to enlighten whether Question Hour is provided in the business list supplied today? Question hour is not fixed; it is only held over questions that have been circulated to us. Held over questions are not the questions that come up under rule 41. One hour is fixed for the questions and answers that come under rule 41 read with rule 32. The practice in this House has always been that held over questions are to be taken up after regular question hour is over and no time limit has been fixed for that by the Speaker. Of course it is left to the Chair to fix time where there is no provision. But here the list of held over questions is supplied and you are saying that the Question Hour is over. We want to know which is correct. I submit there cannot be any time limit because you have assured that unless a member is absent all the held over questions would be put and answered. Therefore the fundamental right of members is being hampered by

declaring that question hour is over. These questions being held over, every member must have the right to ask supplementary and under special circumstances even if it takes three hours, you have to provide for it.

Mr. SPEAKER.—I have heard the arguments of the hon. Member Sri Nanje Gowda and the hon. Member Sri M. Nagappa. It is a very important point and I would like to consider more carefully and give my ruling. In case I uphold the point, these questions will be put down again in the agenda for reply.

SHORT NOTICE QUESTIONS AND ANSWERS

Illtreatment of Harijans in Mangalur Village, Yelburga Taluk

Sriyuths :

5. H. N. NANJE GOWA (Arkalgud).—
M. NAGAPPA (Raichur).—
M. H. JAYAPRAKSH NARAYAN (Sirsi).—
S. BANGARAPPA (Sorab).—

Will the Chief Minister be pleased to state :—

(*a*) whether Government is aware of the fact that last week in Mangalur village, Taluk Yelburga, District Raichur, the Harjans were charged Rs. 5 for a cup of coffee as fine for entering a hotel in that village ;

(*b*) whether Government has taken any action on the persons who have practised 'Untouchability' at the public place according to law ;

(*c*) if so, the action taken ;

(*d*) the name of the Hotel and whether that hotel is managed after taking licence ;

(*e*) the names of Harijans who even after paying five rupees, were rediculed by throwing cowdung water on them ;

(*f*) whether Harijans of Mangalur village have sent application to the Chief Minister and Deputy Social Welfare Minister for protection of their life and property ;

(*g*) if so, the protection provided by the Police or the Social Welfare Department ?

Sri MANIKRAO PATIL (Deputy Minister for Home).—

(*a*) No.

(*b*) Yes.